ಸಾಕ್ಷಿಯನ್ನು ಈ ದಿನ ದಿನಾಂಕ 21.09.2024 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

**ವಾಟೀ ಸವಾಲುಃ ಶ್ರೀ ಎಚ್ ಆರ್ ಎಮ್ ವಕೀಲರಿಂದಃ 1 ರಿಂದ 3 ನೇ ಪ್ರತಿವಾದಿ ಪರವಾಗಿಃ**

ನಾನು ಬಿ ಎಸ್ ಸಿ ಪದವಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮೂರನೇ ವಾದಿಯ ಟ್ರಸ್ಟಿನ ವಾದಿಯಾಗಿರುತ್ತೇನೆ. ಒಂದರಿಂದ ನಾಲ್ಕನೇ ವಾದಿ ಟ್ರಸ್ಟಿಗಳು ಸ್ವತಂತ್ರ ಟ್ರಸ್ಟಿಗಳು ಎಂದರೆ ಸರಿ. ನಾನು ಒಂದು, ಎರಡು ಮತ್ತು ನಾಲ್ಕನೇ ವಾದಿ ಟ್ರಸ್ಟಗಳ ಟ್ರಸ್ಟಿ ಆಗಿರದ ಕಾರಣ ಸದರಿ ವಾದಿಯರ ಬಾಬ್ತು ಸಾಕ್ಷಿ ಹೇಳಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಒಂದರಿಂದ ನಾಲ್ಕನೇ ಟ್ರಸ್ಟಗಳ ಪರವಾಗಿ ಸಾಕ್ಷಿ ಹೇಳಲು ನನಗೆ ಜಂಟಿಯಾಗಿ ಅಧಿಕಾರ ನೀಡಿರುತ್ತಾರೆ. ಒಂದರಿಂದ ನಾಲ್ಕನೇ ವಾದಿಯವರ ಪರವಾಗಿ ಸಾಕ್ಷಿ ಹೇಳುವ ಬಗ್ಗೆ ನನಗೆ ಅಧಿಕಾರ ಇದೆ ಎಂದು ತೋರಿಸುವ ಬಗ್ಗೆ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯ ಬಗ್ಗೆ ಪ್ರಮಾಣ ಪತ್ರವನ್ನು ನಾನು 1 ರಿಂದ 12, 14, 16 ರಿಂದ 19 ಮತ್ತು 21 ರಿಂದ 23 ನೇ ವಾದಿಯವರ ಪರವಾಗಿಯೂ ಸಹ ಸಲ್ಲಿಸಿರುತ್ತೇನೆ.

ಒಂದರಿಂದ ನಾಲ್ಕನೇ ವಾದಿಯವರಿಗೆ ಸಂಬಂಧಪಟ್ಟ ಟ್ರಸ್ಟ ಡೀಡ್‌ಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೇನೆ. ಈಗ ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ ನಿಪಿ-1 ರಿಂದ ನಿಪಿ-18 ದಾಖಲೆಗಳಲ್ಲಿ ಟ್ರಸ್ಟ ಡೀಡ್ ಯಾವುದು ಎಂದು ನನಗೆ ಹೇಳಲು ಸಾಧ್ಯವಿಲ್ಲ. ಟ್ರಸ್ಟ ಎಂದರೇನು ಎಂಬುದು ನನಗೆ ಗೊತ್ತಿಲ್ಲ. ಟ್ರಸ್ಟನ್ನು ಧಾರ್ಮಿಕ ಕಾರ್ಯಕ್ರಮಗಳನ್ನು ಒಟ್ಟುಸೇರಿ ಮಾಡುವ ಉದ್ದೇಶದಿಂದ ರಚನೆ ಮಾಡುತ್ತಾರೆ.

ಮೂರನೇ ವಾದಿ ಟ್ರಸ್ಟಿನ ಆಡಳಿತ ಕಚೇರಿ ಎಮ್.ಕೆ.ಹುಬ್ಬಳ್ಳಿಯಲ್ಲಿರುವ ನರಸಿಂಹ ದೇವಸ್ಥಾನದಲ್ಲಿರುವ ಕಟ್ಟಡದಲ್ಲಿರುತ್ತದೆ. ಸದರಿ ನರಸಿಂಹ ದೇವಸ್ಥಾನದ ಆಸ್ತಿ ಸರ್ವೆ ನಂಬರಗಳು ಈಗ ನನಗೆ ಗೊತ್ತಿಲ್ಲ. ಆದರೆ ಸದರಿ ಆಸ್ತಿಗಳ ಮಾಲೀಕರು ಶೇಷಗಿರಿ ನರಸಿಂಹಾಚಾರ ಪೂಜಾರ ಆಗಿರುತ್ತಾರೆ. ಅವರ ಮಾಲೀಕತ್ವವನ್ನು ಪರಿಶೀಲಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕೇಸ ದಾಖಲು ಮಾಡಿರುತ್ತೇವೆ. ಸದರಿ ಶೇಷಗಿರಿ ನರಸಿಂಹಾಚಾರ ಪೂಜಾರರವರು ಈಗಲೂ ಜೀವಂತ ಇದ್ದಾರೆ. ಈ ಮೇಲೆ ಹೇಳಿರುವ ನರಸಿಂಹ ದೇವಸ್ಥಾನದ ಕಟ್ಟಡಗಳು ಮತ್ತು ಎಲ್ಲಾ ಆಸ್ತಿಗಳು ಶೇಷಗಿರಿ ನರಸಿಂಹಾಚಾರ ಪೂಜಾರರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ದೇವಸ್ಥಾನದ ಆಸ್ತಿಗಳು ಶೇಷಗಿರಿ ನರಸಿಂಹಾಚಾರ ಪೂಜಾರರವರ ಹೆಸರನಲ್ಲಿರುವ ಕಾರಣ ಸದರಿ ದೇವಸ್ಥಾನದ ಕಟ್ಟಡದಲ್ಲಿ ಬೇರೆ ಯಾರಿಗೂ ಯಾವ ರೀತಿಯಲ್ಲಿ ಚಟುವಟಿಕೆಗಳನ್ನು ಮಾಡುವ ಹಕಿಲ್ಲ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯ ಬಗ್ಗೆ ಪ್ರಮಾಣ ಪತ್ರವನ್ನು ಸಿದ್ಧಪಡಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಎಮ್.ಕೆ.ಹುಬ್ಬಳ್ಳಿ ಗ್ರಾಮದ ಸರ್ವೆ ನಂಬರ **462** ಆಸ್ತಿಯ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ ಆಸ್ತಿಯಲ್ಲಿ ನರಸಿಂಹ ದೇವಸ್ಥಾನ ಇರುವುದು ಎಂದರೆ ಸರಿ. ಸದರಿ ಸರ್ವೆ ನಂಬರ ಆಸ್ತಿಯ ಮಾಲೀಕರು ಶೇಷಗಿರಿ ನರಸಿಂಹಾಚಾರ ಪೂಜಾರರವರು ಎಂದರೆ ಸರಿ, ಆದರೆ ಸದರಿ ಮಾಲೀಕತ್ವಬವನ್ನು ನಾನು ಉಚ್ಚ ನ್ಯಾಯಾಲಯದಲ್ಲಿ ಕೇಸ್ ಹಾಕಿ ಪ್ರಶ್ನಿಸಿರುತ್ತೇವೆ. ಸದರಿ ಸರ್ವೆ ನಂತರ ಆಸ್ತಿಯು ದೇವಸ್ಥಾನಕ್ಕೆ ಸೇರಿದ್ದು ಎಂದು ನಾವು ಶೇಷಗಿರಿ ನರಸಿಂಹಾಚಾರ ಪೂಜಾರರವರ ಮಾಲೀಕತ್ವವನ್ನು ಪ್ರಶ್ನಿಸಿರುತ್ತೇವೆ. ಸದರಿ ಆಸ್ತಿಯು ನರಸಿಂಹ ದೇವಸ್ಥಾನಕ್ಕೆ ಸೇರಿದ್ದು ಎಂದು ತೋರಿಸಲು ನಮ್ಮ ಹತ್ತಿರ ಪಂಚಾಯತಿ ದಾಖಲೆಗಳು ಇವೆ. ಸದರಿ ಆಸ್ತಿ ನರಸಿಂಹ ದೇವಸ್ಥಾನಕ್ಕೆ ಸೇರಿದ್ದು ಎಂದು ತೋರಿಸುವ ಬಗ್ಗೆ ಪಂಚಾಯತಿ ಖಾತಾ ದಾಖಲಾತಿಯನ್ನು ಹೊರತು ಪಡಿಸಿ, ಬೇರೆ ಯಾವ ದಾಖಲೆಗಳು ನಮ್ಮ ಹತ್ತಿರ ಇಲ್ಲ.

ಸದರಿ ಆಸ್ತಿಯು ದೇವಸ್ಥಾನಕ್ಕೆ ಸೇರಿದ್ದು ಎಂದು ತೋರಿಸುವ ಬಗ್ಗೆ ನಾವು ನ್ಯಾಯಾಲಯದಲ್ಲಿ ಈ ಕೇಸನಲ್ಲಿ ಹಾಜರು ಪಡಿಸಿರುವ ದಾಖಲೆಗಳು ನಿಪಿ-9 ರಿಂದ ನಿಪಿ-18 ದಾಖಲೆಗಳು ಮಾತ್ರ ಎಂದರೆ ಸರಿ. ಸದರಿ ದಾಖಲೆಗಳು ದೇವಸ್ಥಾನದ ಕಟ್ಟಡಗಳ ಬಗ್ಗೆ ತೆರಿಗೆ ಪಾವತಿ ಮಾಡುವ ದಾಖಲೆಗಳು ಎಂದರೆ ಸರಿ. ಸದರಿ ದಾಖಲೆಗಳಿಗೂ ಒಂದರಿಂದ ನಾಲ್ಕನೇ ವಾದಿ ಟ್ರಸ್ಟಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನರಸಿಂಹ ದೇವಸ್ಥಾನಕ್ಕೂ ಮತ್ತು ಒಂದರಿಂದ ನಾಲ್ಕನೇ ವಾದಿ ಟ್ರಸ್ಟಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾವು ಒಂದರಿಂದ ನಾಲ್ಕನೇ ವಾದಿ ಟ್ರಸ್ಟಗಳನ್ನು ಒಂದುಗೂಡಿಸುವ ಬಗ್ಗೆ ಪರಿಹಾರ ಕೇಳಿರುತ್ತೇವೆ.

(ಈ ಹಂತದಲ್ಲಿ ನ್ಯಾಯಾಲಯದ ಸಮಯವಾದ್ದರಿಂದ ಸಾಕ್ಷಿ ವಿಚಾರಣೆಯನ್ನು ಮುಂದೂಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.